ಕಡೂರು ಡಿಸ್ಟ್ರಿಕ್ಟ್.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

1. ಕಂದಾಯದ ಬಾಕೀದಾರರಾದ ಗೋಣಿಬೀಡು ಅಗ್ರಹಾರದ ವೆಂಕಟರಮಣಯ್ಯ ವಗೈರೇರಿಂದ ಬರಬೇಕಾದ ಜಮ್ಮಾ ಕಂದಾಯದ ಬಾಕಿಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಕಡೂರು ಡಿಸ್ಟ್ರಿಕ್ಟು ಮೂಡಿಗೆರೆ ತಾಲ್ಲೂಕು ಆಫೀಸಿನಲ್ಲಿ 30—11—09ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಈ ಹರಾಜು 30—11—09ನೆ ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದೆರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 190 ನೆ ಸಾಲಿಗೆ ವ್ಯರ್ತಿಯಾಗಿ ಸದರೀಯವರು ಸರ್ಕಾರಕ್ಕೆ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಪ್ಪಿಯಲ್ಲಿ ನಮೂದಿಸಿರುವ ತಪ್ಪೀಲ್ ವೇರಿಗೆ, ರೂ. 840—1—4 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡಿದವನು ಕಳೆದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಹ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರನರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಖರ್ಚು ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

6. ಹರಾಜು ಡೆಪ್ಯುಟಿ ಕಮಿಷನರವರಂದಾಗಲಿ ಯಾ ಈ ಭಾಗದಲ್ಲಿ ಅಧಿಕಾರವನ್ನು ಹೊಂದಿದ್ದ ಇತರ ಅಧಿಕಾರಿಯಿಂದಾಗಲೆ ಮುಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

7. ಹರಾಜಿನಲ್ಲಿ ತೆಗೆದುಕೊಂಡವರು ಹರಾಜ್ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದನಂತರ ಡೆಪ್ಯುಟಿ ಕಮಿಷನರವರಿಂದ ಹರಾಜು ಮುಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರನು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವನು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟನಂತರ ಡೆಪ್ಯುಟಿ ಕಮಿಷನರವರ ದಸ್ಕತ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ವಾಲಿತ್ಯಗಳಿಗೆ ಗವರ್ಮೆಂಟಿನವರು ಜವಾಬ್ದಾರ್ರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

8. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲೆ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾರ್ನೂಸಿಂದ ವಿಧಿಸಲ್ಪಟ್ಟ ಕಂಯಿದೆಯಲ್ಲಿ ಮೇಲ್ಪಟ್ಟ ಅಧಿಕಾರಿಗಳಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈನಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಪೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜು ಕಿಮ್ಮತ್ತು.	ನಂಬರ್ ಅಥವಾ ಜಮೀನಿನ ಹೆಸರು	ಜಮೀನು. ಮುಷ್ಕಿ, ತರೀ ಅಥವಾ ಬಾಗಾಯತು	ವಿಸ್ತೀರ್ಣ.	ಪ್ರಕಾರ.	ಅಂದಾಜು ಕಿಮ್ಮತ್ತು.	ಸರ್ಕಾರಕ್ಕೆ ಸಲಿಯಬೇಕಾದ ಜಮೀನು ಕಂದಾಯದ ಜೋಡಿ ಮೊಬಲಗು.	ಸರ್ಕಾರಕ್ಕೆ ಬರಬೇಕಾದ ನೀರೀಟಿನ ಫೀ ಬಗ್ಗೆ ಸಹಿತವಾದ ಬಾಕೀ ಮೊಬಲಗು.
ಮೂಡಿಗೆರೆ	ಗೋಣಿಬೀಡು	ಜೋಡಿ ಗೋಣಿಬೀಡು ಅಗ್ರಹಾರ ಮತ್ತು ದಾಖಲಾ ಗ್ರಾಮಗಳು.	ವೆಂಕಟರಮಣಯ್ಯ ವಗೈರೇರು	... ...			ಮುಷ್ಕಿ ...	ಎ. ಗುಂ. 962 19	ರೂ. ಆ. ಪೈ. 78 5 6	ರೂ. ಪೈ.	ರೂ. ಪೈ.	
							ತರಿ ...	1,188 2	4,105 12 7			
							ಬಾಗಾಯಿತು ...	2 23	10 1 0			
							ಖರಾಬು ...	1,456 39	91 0 0			
							ಜಮ್ಮಾ ...	3,610 3	4,285 3 1	ರೂ. 4,560	ರೂ. ಪೈ. 999 0 0	ರೂ. ಪೈ. ಜೋಡಿ ... 828 13 4 ನೋಟಿಸ್ ಫೀ ... 11 4 0 ಜಮ್ಮಾ ... 840 1 4

ಚೆಕ್ಕು ಬಂದಿ.

ಪೂರ್ವಕ್ಕೆ —ಹೊಸಹಳ್ಳಿ.
ಪಶ್ಚಿಮಕ್ಕೆ —ಚಿನ್ನಗದ ಗ್ರಾಮ.
ದಕ್ಷಿಣಕ್ಕೆ —ವುದಸೆ ಗ್ರಾಮ.
ಉತ್ತರಕ್ಕೆ —ಜೆನ್ನಾಪುರ.

ಇಸ್ತಿಹಾರ್ನಾವೆ.

ತಾರೀಖು 14ನೆ ಅಕ್ಟೋಬರು 1909.

ಚಿಕ್ಕಮಗಳೂರು ತಾಲ್ಲೂಕು ಲಕ್ಯಾ ಹೋಬಳಿಗೆ ಸೇರಿದ ಜೋಡಿ ಮಾಚೇನಹಳ್ಳಿ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರ ಚಿಕ್ಕಮಗಳೂರು ತಾಲ್ಲೂಕು ಕಛೇರಿಯಲ್ಲಿ 1909ನೆ ನವಂಬರು ಮಾಹೆ 29ನೆ ತಾರೀಖು ದಿವಿ 11 ಘಂಟೆಗೆ ಖಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

(ಹೆಚ್ಚು ತಪಶೀಲು ಬಗ್ಯೆ 1909ನೆ ಇಸವಿ ಅಕ್ಟೋಬರು ತಾರೀಖು 21ನೆ ಮುಕ್ತಂ 42ನೆ ನಂಬರ್ ಮೈಸೂರು ಗೆಜೆಟ್ಟಿನ 2ನೆ ಭಾಗದ 828ನೆ ನಂಬರು ಪುಟವನ್ನು ನೋಡತಕ್ಕದ್ದು).

ಕೆ. ಆರ್. ಶ್ರೀನಿವಾಸೈಯ್ಯಂಗಾರ್,
ಡೆಪ್ಯುಟಿ ಕವಿಷನರ್.

ನೋ ಟಿ ಸ್.

ಹೊಳೇನರಶೀಪುರದ ಸಬ್ ಡಿವೀಜ್ಯ ಮ್ಯುನ್ಶೀಫ್ ಕೋರ್ಟಿನಲ್ಲಿ.

1908—1909ನೆ ಇಸವಿ ಅಸಲ್ ನಂಬರ್ 457.

ವಾದಿ.	ಪ್ರತಿವಾದಿಗಳು.
ಅರ್ಕಲಗೂಡು ತಾಲ್ಲೂಕು ಕೊಣನೂರು ಕಸಬಾದಲ್ಲಿ ಇರುವ ಕಸಬಾ ಶಾನುಭೋಗ ಸುಬ್ಬರಾಯರು.	ಸದರಿ ತಾಲ್ಲೂಕು ಕೊಣನೂರು ಹೋಬಳಿ ಅಕ್ಕಲವಾಡಿ ಗ್ರಾಮದಲ್ಲಿ ಇರುವ ಪಟೇಲ್ ಅಪ್ಪಣ್ಣಿ ಗೌಡನ ಮಗ ಚಿಕ್ಕೆಗೌಡ ವಗೈರೆ.

ಈ ಕೆಳಗಿನ ಷೆಡ್ಯೂಲ್ ಜಮೀನ್ ಮೇಲೆ ಪ್ರತಿವಾದೀರು ಮತ್ತು ಇತರರು ಪ್ರವೇಶ ಮಾಡಕೂಡದೆಂತಲೂ ಮತ್ತು ಸದರಿ ಜಮೀನ್ನಲ್ಲಿ ಇರತಕ್ಕ ಕಲ್ಲುಭಾವಿಯಿಂದ ನೀರು ತೆಗೆದುಕೊಂಡು ಹೋಗಕೂಡದೆಂತಲೂ ಖಾಯಂ ಇಂಜೆಕ್ಷನ್ ಕೊಡಿಸುವದರ, ಮೂಲಕ ನಿರ್ಬಂಧಪಡಿಸಬೇಕೆಂದು ವಾದಿ ದಾವೆ ಮಾಡಿರುತ್ತಾರೆ. ಸದರಿ ವೊಕದ್ದಮಾವನ್ನು ಹೀರಂಗ್ ಬಗ್ಯೆ 1909ನೆ ಇಸವಿ ನವೆಂಬರ್ ತಾರೀಖು 1-ನೆ ಗುರುವಾರಕ್ಕೆ ಇಟ್ಟಿರುತ್ತೆ. ಮೇಲೆ ಕಂಡಂತೆ ಇಂಜೆಕ್ಷನ್ ಆರ್ಡರ್ ಕೊಡಕೂಡದೆಂಬ ಮತ್ತು ಸದರಿ ಸ್ವತ್ತಿನಲ್ಲಿ ಹಕ್ಕು ಬಾಧ್ಯತೆ ಸಮಂಜಸವುಳ್ಳವರು ಮತ್ತು ಕಕ್ಷಿಗಾರರಾಗಿ ಸೇರಲು ಇಷ್ಟವುಳ್ಳವರು ಸಹಾ ಆ ತಾರೀಖು ದಿವಿ 11 ಘಂಟೆಗೆ ಈ ಕೋರ್ಟು ರೂಬರೂ ಹಾಜರಾಗಿ ವ್ಯವಹರಿಸತಕ್ಕದ್ದು. ತಪ್ಪಿದರೆ ರೂಲ್ಸು ಮೇರೆ ನಡಿಸಲ್ಪಡುತ್ತೆ.

ಬ ತಾರೀಖು 19ನೆ ಅಕ್ಟೋಬರು ಸ್ಯ 1909ನೆ ಇಸವಿ.

ಷೆಡ್ಯೂಲ್.

ಅರಕಲಗೂಡು ತಾಲ್ಲೂಕು ಕೊಣನೂರು ಹೋಬಳಿ ಅಕ್ಕಲವಾಡಿ ಗ್ರಾಮದಲ್ಲಿ ಪೂರ್ವಕ್ಕೆ—31ನೆ ನಂಬರು ಜಮೀನ್, ಪಶ್ಚಿಮಕ್ಕೆ—33ನೆ ನಂಬರು ಜಮೀನ್, ದಕ್ಷಿಣಕ್ಕೆ—30ನೆ ನಂಬರು ಜಮೀನ್, ಉತ್ತರಕ್ಕೆ ಕೆರೆ, ಈ ಮಧ್ಯೆ ಇರುವ ತರಿ ಎರಡು ಎಕರೆ ಐದುಗುಂಟೆ, ಖುಷ್ಕಿ ಎರಡು ಎಕರೆ ನಾಲ್ಕು ಗುಂಟೆ, ಆಕಾರ ಒಂಭತ್ತು ರೂಪಾಯಿವುಳ್ಳ ಈ ನಂಬರಿನಲ್ಲಿ ಬಾಗಾಯಿತು ಆಗಿರುತ್ತೆ.

ಪಿ. ಮಹದೇವಯ್ಯ,
ಮುನ್ಸೀಫ್.

ಪ್ರಸಿದ್ಧ ಪತ್ರಿಕೆ.

ಒಳ್ಳೇ ಸಮಯ!

ಶ್ರೀಮಂ ಮಹಾರಾಜರವರ ಗೌರ್ನಮೆಂಟಿನವರು ಈ ರೈಲ್ವೆಗಾಗಿ ಖರ್ಚಾದ ಮೊಬಲಗಿನ ಮೇಲೆ ಶೇಕಡ 4 ರಂತೆ ಡಿವಿಡೆಂಡನ್ನು ಕೊಡುವಹಾಗೆ ಭರವಸೆಯನ್ನು ದಯಪಾಲಿಸಿರುತ್ತಾರೆ; ಮತ್ತು ಇದಕ್ಕಿಂತಲೂ ಹೆಚ್ಚಾದ ಲಾಭವು ದೊರೆಯುವ ಸಂದರ್ಭವೂ ಉಂಟು.

ಬೆಂಗಳೂರು—ಚಿಕ್ಕಬಳ್ಳಾಪುರದ ಲೈಟ್ ರೈಲ್ವೆ ಕಂಪೆನಿ ಲಿಮಿಟೆಡ್.

1895ನೆ ಇಸವಿಯ 5ನೆ ಮೈಸೂರು ಕಂಪೆನಿ ರೆಗ್ಯುಲೇಷನ್ ಅನುಸರಿಸಿ ರಿಜಿಸ್ಟರ್ ಮಾಡಿಧೆ.

ಮುಖ್ಯ ಆಫೀಸು :—ಬೆಂಗಳೂರು ಚಾಮರಾಜಪೇಟೆ; ಬ್ರಾಂಚ್ ಆಫೀಸು :—ಬೊಂಬಾಯಿ ಕೋಟೆ.

ಮೂಲಧನ 12,00,000 ರೂಪಾಯಿಗಳು.

ಷೇರುಗಳು :—

ಷೇರು 1ಕ್ಕೆ 25 ರೂಪಾಯಿ ಉಳ್ಳ 48,000 ಷೇರುಗಳಾಗಿ ಮೇಲ್ಕಂಡ ಮೂಲಧನವು ಭಾಗಿಸಲ್ಪಟಿಧೆ. ಇದರ ಪೈಕಿ ಆಗಲೇ 35,000 ಷೇರುಗಳು ಬಿಕರಿಯಾಗಿಧೆ. ಉಳಿದ 13,000 ಷೇರುಗಳನ್ನು ಈಗ ಜನಗಳು ತೆಗದುಕೊಳ್ಳಬಹುದು.

ಷೇರುಗಳನ್ನು ತೆಗೆದುಕೊಳ್ಳತಕ್ಕವರು ಪಾವತಿ ಮಾಡತಕ್ಕ ಮೊಬಲಗಿನ ವಿವರ :—ಅಪ್ಲಿಕೇಷನ್ನೊಂದಿಗೆ ಷೇರು 1ಕ್ಕೆ 1 ರೂಪಾಯಿಯೂ, ಹಂಚಿಕೆಯ ಕಾಲದಲ್ಲಿ ಷೇರು 1ಕ್ಕೆ 4 ರೂಪಾಯಿಯೂ, ಉಳಿದ 20 ರೂಪಾಯಿಗಳು 4 ಕಂತುಗಳಲ್ಲಿ ಕಂತು 1ಕ್ಕೆ 5 ರೂಪಾಯಿನಂತೆ ನೋಟಿಸ್ ಬಂದ ಕಾಲದಲ್ಲಿ ಕೊಡತಕ್ಕದ್ದು. ಬಂದೊಂದು ಕಂತಿಗೂ 2 ತಿಂಗಳಿಗೆ ಕಡಮೆ ಇಲ್ಲದಂತೆ ವ್ಯವಧಾನ ಕೊಡಲ್ಪಡುವದು.